**1 ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**
**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:1737/2023**

| ಪಿರ್ಯಾದುದಾರರು : | ವಿರುದ್ಧ | ಆರೋಪಿತರು: |
|---|---|---|
| ಚನ್ನಗಿರಿ ಪೊಲೀಸ್ ಠಾಣೆ | | ಎ 1. ಹರೀಶ<br>ಬಿನ್ ಹಾಲಪ್ಪ<br>ವಯಸ್ಸುಃ 33 ವರ್ಷ,<br><br>ಎ 2. ಸುನಿಲ<br>ಬಿನ್ ರಾಜಪ್ಪ<br>ವಯಸ್ಸುಃ 31 ವರ್ಷ,<br><br>ಎ 3. ರಂಗನಾಥ<br>ಬಿನ್ ಮಂಜಪ್ಪ<br>ವಯಸ್ಸುಃ 30 ವರ್ಷ,<br>ಎಲ್ಲರ ವಾಸಃ ಜಯಂತಿನಗರ ಗ್ರಾಮ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ. |

**ದೋಷಾರೋಪಣೆ**

ನಾನು **ಕುಃ ಶಮ ಶ್ರೀವತ್ಸ**, 1 ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೇಯದಾಗಿ ಹಳೇ ದ್ವೇಷ್ಷ ಹಿನ್ನೆಲೆಯಲ್ಲಿ ದಿಃ 27.06.2022 ರಂದು ರಾತ್ರಿ 8.00 ಗಂಟೆಯ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣೆ ಸರಹದ್ದಿಗೆ ನಲ್ಲೂರು ಗ್ರಾಮದ ವಿನುಸಾಗರ ಬಾರ್ ಮತುತ ರೆಸ್ಟೋರೆಂಟ್ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾ.ಸಾ 1 ಮತ್ತ 4 ರವರನ್ನು ಅಡ್ಡಗಟ್ಟಿ ತೆದು ನಿಲ್ಲಿಸುವ ಮೂಲಕ ಭಾ.ದಂ.ಸಂ.ಕಲಂ. 341 ಸಹ ಕಲಂ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ .

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ, ದಿನಾಂಕದಂದು 2 ಮತ್ತು 3 ನೇ ಆರೋಪಿತರಾದ ನೀವುಗಳು ಚಾ.ಸಾ1 ಮತ್ತು 4 ರವರಿಗೆ ಕೈ ಕಾಲಿನಿಂದ ಮೈ ಕೈಗೆ ಹೊಡೆದು ಎದೆಗೆ , ಬೆನ್ನಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿ, ಭಾ.ದಂ.ಸಂ.ಕಲಂ 323 ಸಹ ಕಲಂ.34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ, ದಿನಾಂಕದಂದು1 ರಿಂದ 3 ನೇ ಆ್ಪರೋಪಿತರಾದ ನೀವುಗಳು ಚಾ.ಸಾ5 ರವರ ಸೀರೆ ಹಿಡಿದು ಎಳೆದಾಡಿ ಅವರ ಮಾನಕ್ಕೆ ಧಕ್ಕೆ ಉಂಟು ಮಾಡುವ ಮೂಲಕ ಭಾ.ದಂ.ಸಂ.ಕಲಂ 354 ಸಹ ಕಲಂ.34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ನಾಲ್ಕನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ, ದಿನಾಂಕದಂದು ಆರೋಪಿತರಾದ ನೀವು ಚಾ.ಸಾ1 ಮತ್ತು 4 ರವರಿಗೆ ಸೂಳೇ ಮಗನೇ , ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಭಾ.ದಂ.ಸಂ.ಕಲಂ 504 ಸಹ ಕಲಂ.34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ, ದಿನಾಂಕದಂದು 1 ನೇ ಆರೋಪಿಯಾದ ನೀವು ಚಾ.ಸಾ1 ರವರಿಗೆ ಬಲಗೈ ಮುಷ್ಠಿ ಮಾಡಿ , ಮುಖಕ್ಕೆ ಬಲವಾಗಿ ಹೆಡೆದು ಚಾ.ಸಾ 1 ರವರ ಮಂದಿನ ಒಂದು ಹಲ್ಲು ಸ್ಥಳದಲ್ಲಿ ಮುರಿದು ಉದುರಿ ಹೋಗುವ ಹಾಗೆ ಹೊಡೆದು ತೀವ್ರ ಸ್ವರೂಪದ ನೋವುಂಟು ಮಾಡಿದ್ದರಿಂದ ಭಾ.ದಂ.ಸಂ.ಕಲಂ.325 ಸಹ ಕಲಂ.34 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ.
ದಿನಾಂಕ:

Sd/-

**( ಕುಃ ಶಮ ಶ್ರೀವತ್ಸ)**
**1 ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ**
**ಸಿಸಿ ನಂ:1737/2023**

**1. ಕರ್ನಾಟಕ ಸರ್ಕಾರ (ಚನ್ನಗಿರಿ ಪಿ.ಎಸ್ )**

**ವಿರುದ್ಧ**

ಎ 3. ರಂಗನಾಥ

## ಆರೋಪಿಯ ಹೇಳಿಕೆ

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತನಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ ______________ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ಸ್ಥಳಃ ಚನ್ನಗಿರಿ
ದಿನಾಂಕಃ ____________

Sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನಗಿರಿ.